<u>ದಿನಾಂಕಃ**07-08-2024** ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಆರ್.ಆರ್.ಎಸ್. ವಕೀಲರಿಂದಃ-</u>

ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ವ್ಯಾಪಾರ ವೃತ್ತಿ ಮಾಡುತ್ತಿದ್ದೇನೆ. ಸಾಕ್ಷಿ ಮುಂದುವರಿದು ಹಾಲಿ ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇನೆ ಎನ್ನುತ್ತಾರೆ. ನನ್ನ ಮನೆ ವಿಜಯಪುರದಲ್ಲಿ ಇದೆ. ಪಿರ್ಯಾದುದಾರರ ತಂದೆ ಮಂಜಶೆಟ್ಟಿ ಇವರು ಸುಮಾರು 30 ವರ್ಷಗಳಿಂದ ನನಗೆ ಗೊತ್ತು. ಮಂಜಶೆಟ್ಟಿ ಇವರ ಮೊದಲನೇ ಹೆಂಡತಿ ಹೆಸರು ಲಕ್ಷ್ಮಮ್ಮ. ಮಂಜಶೆಟ್ಟಿ ಇವರಿಗೆ ಕುಮಾರ್ ಮತ್ತು ಜಯಶ್ರೀ ಎಂಬ ಇಬ್ಬರು ಮಕ್ಕಳು. ಪಿರ್ಯಾದುದಾರರು ಮೊದಲಿನಿಂದ ನನಗೆ ಗೊತ್ತು. ಆರೋಪಿ ನನಗೆ ಗೊತ್ತಿಲ್ಲ. ನಾನು ಹಿಂದು ಧರ್ಮದವನು. ಹಿಂದು ಸಂಪ್ರದಾಯದಲ್ಲಿ ಗಂಡ ಹೆಂಡತಿ ಸಂಬಂಧ ಗುರುತಿಸಲು ವಿವಾಹ ಕಾಲಕ್ಕೆ ತೆಗೆದ ಫೋಟೋ ನೋಡಿದರೆ, ವಿವಾಹ ನೊಂದಣಿಯಾಗಿದ್ದರೆ ಅವುಗಳ ಆಧಾರದ ಮೇಲೆ ಗಂಡ ಹೆಂಡತಿ ಸಂಬಂಧ ಗುರುತಿಸಬಹುದು. ದೇವಸ್ಥಾನದಲ್ಲಿ ವಿವಾಹವಾದರೆ ವಿವಾಹ ಪ್ರಮಾಣ ಪತ್ರವನ್ನ ಕೊಡುವುದಿಲ್ಲ. ಮಂಜಶೆಟ್ಟಿ ಇವರನ್ನ ನಾನು ನೋಡಿದ್ದೇನೆ. ಸಾಕ್ಷಿಗೆ 3 ಫೋಟೋಗಳನ್ನ ತೋರಿಸಿ ಅವುಗಳಲ್ಲಿ ಇರುವ ವ್ಯಕ್ತಿ ಯಾರು ಎಂದರೆ ಸಾಕ್ಷಿ ಅವರು ಮಂಜಶೆಟ್ಟಿ ಎನ್ನುತ್ತಾರೆ, ಸಾಕ್ಷಿಗೆ ತೋರಿಸಲಾದ ಫೋಟೋಗಳನ್ನ ನಿಡಿ-1 ರಿಂದ ನಿಡಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನ ತೋರಿಸಿ ಅದರಲ್ಲಿ ಇರುವ ವ್ಯಕ್ತಿ ಯಾರು ಎಂದರೆ ಸಾಕ್ಷಿ ಅದರಲ್ಲಿ ಸಹ ಮಂಜಶೆಟ್ಟಿ ಇದ್ದಾರೆ ಎಂದು ಗುರುತಿಸಿದ್ದಾರೆ. ಸದರಿ ಫೋಟೋವನ್ನ ನಿಡಿ-4 ಎಂದು ಗುರುತಿಸಲಾಯಿತು. ನಿಡಿ-1 ರಿಂದ ನಿಡಿ-4 ರ ಫೋಟೋಗಳು ಮದುವೆ ಸಮಾರಂಭದ ಫೋಟೋಗಳು. ನಿಡಿ-1 ರಿಂದ 4 ರಲ್ಲಿ ಕಾಣುವ ಮದುವೆ ಹೆಣ್ಣು ಆರೋಪಿಯಾಗಿರುತ್ತಾರೆ. ಮಂಜಶೆಟ್ಟಿ ಇವರು ಆರೋಪಿಯನ್ನ ವಿವಾಹ ಮಾಡಿಕೊಂಡಿಲ್ಲ ಎಂದು ಯಾರು ಹೇಳಿದರು ಎಂದರೆ ಸಾಕ್ಷಿ ನಾನು ಅವರ

ವಿವಾಹಕ್ಕೆ ಹೋಗಿಲ್ಲ ಮತ್ತು ಅವರ ವಿವಾಹ ಆದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ ಎನ್ನುತ್ತಾರೆ. ಯಾವುದೇ ಆಸ್ತಿ ಖಾತೆ ಬದಲಾವಣೆಗೆ ಏನೆಲ್ಲಾ ದಾಖಲಾತಿಗಳು ಅವಶ್ಯಕತೆ ಇದೆ ಎಂದು ನನಗೆ ಮಾಹಿತಿ ಇದೆ. ಮಂಜುನಾಥ ಕೃಪ ಲಕ್ಷ್ಮಿ ನಿವಾಸ ಇದರ ಖಾತೆ ಆರೋಪಿ ಹೆಸರಿಗೆ ಬರುವ ಮೊದಲು ಪಿರ್ಯಾದುದಾರ ಮತ್ತು ಅವರ ಸಹೋದರಿಯ ಜಂಟಿ ಖಾತೆಯಲ್ಲಿ ಇತ್ತು ಎಂದರೆ ಸರಿ. ಆರೋಪಿ ಹೆಸರಿಗೆ ಯಾವ ಆಧಾರದ ಮೇಲೆ ಸದರಿ ಆಸ್ತಿ ಖಾತೆ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಸದರಿ ಆಸ್ತಿ ಸಂಬಂಧ ಪಿರ್ಯಾದುದಾರರ ತಾಯಿ ಲಕ್ಷ್ಮಮ್ಮ ಈಕೆ ಉಯಿಲು ಬರೆದಿದ್ದರಿಂದ ಪಿರ್ಯಾದುದಾರರು ಮತ್ತು ಅವರ ಸಹೋದರಿ ಹೆಸರಿಗೆ ಜಂಟಿ ಖಾತೆ ಆಗಿತ್ತು ಎನ್ನುತ್ತಾರೆ. **1997** ರಲ್ಲಿ ಲಕ್ಷ್ಮಮ್ಮ ಈಕೆ ಮರಣ ಹೊಂದಿರುತ್ತಾರೆ. **1997** ರಲ್ಲಿಯೇ ಪಿರ್ಯಾದುದಾರರು ಮತ್ತು ಅವರ ಸಹೋದರಿ ಹೆಸರಿಗೆ ಮಂಜುನಾಥ ಕೃಪ ಲಕ್ಷ್ಮಿ ನಿವಾಸ ಈ ಆಸ್ತಿಯ ಜಂಟಿ ಖಾತೆ ಆಗಿರುತ್ತದೆ. **1999** ರಲ್ಲಿ ಪಿರ್ಯಾದುದಾರರು ಮತ್ತು ಅವರ ತಂದೆ ನಡುವೆ ವಿಭಾಗ ಪತ್ರ ಆದ ವಿಚಾರ ನನಗೆ ಗೊತ್ತಿಲ್ಲ. ಲಕ್ಷ್ಮಮ್ಮ ಈಕೆ ಪಿರ್ಯಾದುದಾರರು ಮತ್ತು ಅವರ ಸಹೋದರಿ ಪರವಾಗಿ ಬರೆದಿರುತ್ತಾರೆ ಎಂದು ಹೇಳಲಾದ ಉಯಿಲನ್ನ ನಾನು ಖುದ್ದು ನೋಡಿಲ್ಲ. ಸಾಕ್ಷಿ ಮುಂದುವರಿದು ಆ ವಿಚಾರವನ್ನ ಪಿರ್ಯಾದುದಾರರು ನನಗೆ ಹೇಳಿದರು ಎನ್ನುತ್ತಾರೆ. ಅದರ ಅಧಾರದ ಮೇಲೆ ಜಂಟಿ ಖಾತ ಆಗಿದೆ ಎಂದು ನನಗೆ ಪಿರ್ಯಾದುದಾರರು ಹೇಳಿದ್ದಾರೆ ಎಂದರೆ ಸರಿ. ಯಾವುದೇ ಆಸ್ತಿಯ ಖಾತೆ ಬದಲಾವಣೆ ಹಕ್ಕುದಾಖಲೆಗಳ ಆಧಾರದ ಮೇಲೆ ಅಥವಾ ವಿಲ್ ಆಧಾರದ ಮೇಲೆ ಅಥವಾ ಪೌತಿ ಖಾತೆ ಆಧಾರದ ಮೇಲೆ ಆಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಖಾತೆ ಬದಲಾವಣೆ ಕಾಲಕ್ಕೆ ವಂಶವೃಕ್ಷ, ಮರಣ ಪ್ರಮಾಣ ಪತ್ರ ಇತ್ಯಾದಿ ಕೊಡಬೇಕು ಎನ್ನುತ್ತಾರೆ. ಮಂಜಶೆಟ್ಟಿ ಇವರಿಗೆ ಸೇರಿದ ಮರಣ ಪ್ರಮಾಣ

ಪತ್ರ ನಕಲಿ ಮಾಡಿದ್ದ ವಿಚಾರ ನನಗೆ ಗೊತ್ತಿಲ್ಲ. ಮಂಜಶೆಟ್ಟಿ ಇವರು ಮನೆಯಲ್ಲಿ ನಿಧನರಾಗಿರುತ್ತಾರೆ ಎಂದು ಆರೋಪಿ ಬೇರೆ ಕೇಸ್ ನಲ್ಲಿ ಸುಳ್ಳು ಸಾಕ್ಷ್ಯ ನುಡಿದಿರುತ್ತಾರೆ ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ಆ ವಿಚಾರವನ್ನ ಪಿರ್ಯಾದುದಾರರು ನನಗೆ ಹೇಳಿದರು ಎನ್ನುತ್ತಾರೆ. ನಾನು ಮತ್ತು ಪಿರ್ಯಾದುದಾರರು ಒಟ್ಟಿಗೆ ಸಂಘ ಸಂಸ್ಥೆಗಳಲ್ಲಿ ಸುಮಾರು 25 ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ನಾನು ಮತ್ತು ಪಿರ್ಯಾದುದಾರರು ಒಟ್ಟಿಗೆ ಸಂಘ ಸಂಸ್ಥೆಗಳಲ್ಲಿ ಗುರುತಿಸಿಕೊಂಡಿರುವುದರಿಂದ ಪಿರ್ಯಾದುದಾರರಿಗೆ ಸಹಾಯವಾಗಲೀ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನುಡಿದಿರುತ್ತಾರೆ ಎಂದು ಹೇಳಲಾದ ಸಾಕ್ಷ್ಯ ವಿಚಾರಣೆ ಬಗ್ಗೆ ಪಿರ್ಯಾದುದಾರರು ಹೇಳಿದ್ದರಿಂದ ನನಗೆ ತಿಳಿದಿದೆಯೇ ಹೊರತು ಈ ಸಂಬಂಧ ನನಗೆ ಖುದ್ದು ಮಾಹಿತಿ ಇಲ್ಲ.

<u>ಮರು ಸವಾಲುಃ ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ